**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 304/2022 |
| ಪಿ.ಡಬ್ಲ್ಯೂ | 2 |

| | | |
|---|---|---|
| ಹೆಸರು | :- | ಸುರೇಶ ಬಾಗಾರ |
| ತಂದೆ/ಗಂಡನ ಹೆಸರು | :- | ಶಿವಪ್ಪ |
| ವಯಸ್ಸು | :- | 32 ವರ್ಷ |
| ಉದ್ಯೋಗ | :- | ಮ್ಯಾನೇಜರ, ಕರ್ನಾಟಕ ಬ್ಯಾಂಕ ಮುಧೋಳ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ25.11.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಶ್ರೀ.ಸಿ.ಪಿ.ಕೆ ವಕೀಲರಿಂದ ಶ್ರೀ.ಎ.ಎಸ್.ಎಸ್ ವಕೀಲರ ಪರವಾಗಿ**

1. ನಾನು ಕಳೆದ ಒಂದೂವರೆ ವರ್ಷದಿಂದ ಕರ್ನಾಟಕ ಬ್ಯಾಂಕ, ಮುಧೋಳ ಶಾಖೆಯಲ್ಲಿ ಮ್ಯಾನೇಜರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆರೋಪಿತನ ಖಾತೆ ನಮ್ಮ ಬ್ಯಾಂಕಿನಲ್ಲಿ ಇದೆ. ಆರೋಪಿತನ ಖಾತೆಯ ಸಂಖ್ಯೆ 5282500101241401 ಆಗಿರುತ್ತದೆ. ಸಾಕ್ಷಿಗೆ ಈಗ ನಿಪಿ-1(ಎ) ಸಹಿ ತೋರಿಸುತ್ತಿದ್ದು, ಅದು ಆರೋಪಿತನ ಸಹಿ ಎಂದು ಸಾಕ್ಷಿ ನುಡಿಯುತ್ತಾರೆ.

**ಪಾಟೀ ಸವಾಲು : ಶ್ರೀ.ಎಸ್.ಬಿ.ಜೆ ವಕೀಲರಿಂದ ಆರೋಪಿ ಪರವಾಗಿ**

1. ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬರಲು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿಯು ಪೊಲೀಸರಿಂದ ಕರೆ ಬಂದಿದ್ದು, ಆ ಕಾರಣದಿಂದ ಬಂದಿದ್ದೆ ಎಂದು ಹೇಳುತ್ತಾರೆ. ಯಾವ ಪ್ರಕರಣದಲ್ಲಿ ಪೊಲೀಸರು ನನಗೆ ತಿಳಿಸಿರುತ್ತಾರೆ. ಯಾರ ಪರವಾಗಿ ಸಾಕ್ಷಿ ನುಡಿಯಬೇಕು ಎಂದು ನಿಮಗೆ ತಿಳಿಸಿದರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಖಾತೆಯ ವಿವರಗಳನ್ನು ತೆಗೆದುಕೊಂಡು ಬರಲು ನಿಮಗೆ ಯಾರು ತಿಳಿಸಿದರು ಎಂದರೆ ಸಾಕ್ಷಿಯು ಪೊಲೀಸರು ಆರೋಪಿತನ ಹೆಸರು ಹೇಳಿದ್ದು, ಸಾಕ್ಷಿ ನುಡಿಯಲು ಅನುಕೂಲವಾಗಲೀ ಎಂದು ಖಾತಾ ವಿವರಗಳನ್ನು ತಿಳಿದಕೊಂಡು ಬಂದೆ ಎಂದು ಹೇಳುತ್ತಾರೆ. ಫಿರ್ಯಾದಿದಾರನ ಹೆಸರು ಹೇಳಬಹುದಾ ಎಂದರೆ ಸಮನ್ಸನಲ್ಲಿ ಇದ್ದು, ನನಗೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಫಿರ್ಯಾದಿದಾರ ವಕೀಲರು ನಿಮಗೆ ಅವರ ಪರವಾಗಿ ಸಾಕ್ಷಿ ನುಡಿಯಲು ಹೇಳಿದ್ದರಿಂದ ನೀವು ಈ ಪ್ರಕರಣದಲ್ಲಿ ಬಂದು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ ನಿಮ್ಮ ಬ್ಯಾಂಕಿನಲ್ಲಿ ಯಾವ ದಿನಾಂಕಂದು ಖಾತೆ ತೆರೆದ ಎಂದು ನಿಮಗೆ ಗೊತ್ತಿದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆತನ ಖಾತೆಯಲ್ಲಿ ಎಷ್ಟು ವ್ಯವಹಾರಗಳು ಆಗಿವೆ ಎಂದು ತೆಗೆದು ನೋಡಿದ್ದೀರಾ ಎಂದರೆ ನೋಡಿದ್ದೇನೆ ಎಂದು ಸಾಕ್ಷಿ

ಹೇಳುತ್ತಾರೆ. ಸದರಿ ಖಾತಾ ಉತಾರೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ತೆಗೆದುಕೊಂಡು ಬಂದಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಮುಂದುವರೆದು ನೆಟವರ್ಕ ಪ್ರಾಬ್ಲಮ ಇದ್ದ ಕಾರಣ ತಂದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮುಂದಿನ ದಿನಾಂಕದಂದು ಸದರಿ ಖಾತಾ ಉತಾರೆ ತಂದು ಹಾಜರಪಡಿಸಲು ಯಾವುದೇ ತೊಂದರೆ ಇಲ್ಲ.

2. ಆರೋಪಿತನ ಖಾತೆಯಲ್ಲಿ ಎಷ್ಟು ಮೊತ್ತದ ವ್ಯವಹಾರಗಳು ಆಗಿದ್ದವು ಎಂದು ನೋಡಿದ್ದೀರಾ ಎಂದರೆ ಸಾಕ್ಷಿಯು ಲಕ್ಷಗಟ್ಟಲೇ ವ್ಯವಹಾರಗಳು ಆಗಿಲ್ಲ, ಚಿಕ್ಕ, ಚಿಕ್ಕ ವ್ಯವಹಾರಗಳು ಆಗಿವೆ ಎಂದು ಹೇಳುತ್ತಾರೆ. ನಿಪಿ-1 ಚೆಕ ನಗದೀಕರಣಕ್ಕೆ ಯಾವ ದಿನಾಂಕದಂದು ಬಂದಿತು ಎಂದು ಪರಿಶೀಲಿಸಿದ್ದೀರಾ ಎಂದರೆ ನಾನು ಕೇವಲ ಕಳೆದ ಒಂದೂವರೆ ವರ್ಷದಿಂದ ಕೆಲಸ ಮಾಡುತ್ತಿದ್ದ ಕಾರಣ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಚೆಕ ನಗದೀಕರಣಕ್ಕೆ ಹಾಜರಪಡಿಸಿದಾಗ ನೀವು ಮ್ಯಾನೇಜರ ಇರಲಿಲ್ಲ ಎಂದರೆ ಸರಿ. ಕರ್ನಾಟಕ ಬ್ಯಾಂಕರವರು ಯಾವ ದಿನಾಂಕದಂದು ಹಿಂಬರಹ ನೀಡಿದರು ಎಂದು ಹೇಳಬಹುದಾ ಎಂದರೆ ಸಾಕ್ಷಿಯು ಎಸ್.ಬಿ.ಐ ನಲ್ಲಿ ನಗದೀಕರಣಕ್ಕೆ ಹಾಜರಪಡಿಸಿದ್ದು ನಾವು ಹಿಂಬರಹ ನೀಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಎಸ್.ಬಿ.ಐ ಗೆ ನೀವು ಚೆಕಗೆ ಸಂಬಂಧಪಟ್ಟ ಮಾಹಿತಿಯನ್ನು ಯಾವ ದಿನಾಂಕದಂದು ನೀಡಿದ್ದೀರಿ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಚೆಕ ಮೊತ್ತ ಎಷ್ಟು ಇತ್ತು ಎಂದರೆ ರೂ.19,50,000/- ಎಂದು ಸಾಕ್ಷಿ ಹೇಳುತ್ತಾರೆ. ಆ ರೀತಿ ಸಮನ್ಸನಲ್ಲಿ ನಮೂದಾಗಿತ್ತು. ಸದರಿ ಸಮನ್ಸ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಪೊಲೀಸರೇ ಹಿಂದಿರುಗಿ ಪಡೆದರು ಎಂದು ಹೇಳುತ್ತಾರೆ. ರೂ.19,50,000/- ಎಂದು ಸಮನ್ಸನಲ್ಲಿ ಬರೆದಿತ್ತಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಮನ್ಸ ನೀವು ಓದಿ ಸಹಿ ಮಾಡಿದ್ದೀರಾ ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ಅದರಲ್ಲಿ ರೂ.19,50,000/- ಕ್ಕೆ ಈ ದಿನ ಬಂದು ಸಾಕ್ಷಿ ನುಡಿಯಬೇಕು ಎಂದು ಬರೆದಿತ್ತಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

3. ಸಾಕ್ಷಿಗೆ ಈಗ ನಿಡಿ-10 ಛಾಯಾಚಿತ್ರವನ್ನು ತೋರಿಸುತ್ತಿದ್ದು, ಸದರಿ ಛಾಯಾಚಿತ್ರದಲ್ಲಿರುವ ಚೆಕ ಖಾತೆ ಆರೋಪಿತನದ್ದು ಎಂದರೆ ಸರಿ. ಸದರಿ ಚೆಕನಲ್ಲಿ ಏನು ಮೊತ್ತ ನಮೂದಿಸಲಾಗಿದೆ ಎಂದರೆ 9 ಲಕ್ಷ 50 ಸಾವಿರ ಎಂದು ಸಾಕ್ಷಿ ಹೇಳುತ್ತಾರೆ. ಪಾಸಿಟಿವ ಪೇ ಪ್ರಕಾರ ನಮ್ಮ ಕಡೆಯಿಂದ ಚೆಕ ನಗದೀಕರಣಕ್ಕೆ ಹೋಗಬೇಕಾದರೆ ಗ್ರಾಹಕರಿಗೆ ಕರೆ ಮಾಡಿ ತಿಳಿಸಬೇಕು ಎಂದು ಹೇಳುತ್ತಾರೆ. ಆರೋಪಿತನ ಖಾತೆ ನಿಮ್ಮ ಬ್ಯಾಂಕಿನಲ್ಲಿ ಇದೆ ಎಂದರೆ ಸರಿ. ಆ ರೀತಿ ನೀವು ಆರೋಪಿತನಿಗೆ ಚೆಕ ಬಂದ ಬಗ್ಗೆ ಕರೆ ಮಾಡಿ ತಿಳಿಸಿದಿರಾ ಎಂದರೆ ಆಗ ನಾನು ಸದರಿ ಶಾಖೆಯಲ್ಲಿ

**ಪಿ.ಡಬ್ಲೂ.2**

ಮ್ಯಾನೇಜರ ಆಗಿರಲಿಲ್ಲ ಎಂದು ತಿಳಿಸುತ್ತಾರೆ. ನಿಮ್ಮ ಲೆಜ್ಜರ ಬುಕನಲ್ಲಿ ಆರೋಪಿತನಿಗೆ ಕರೆ ಮಾಡಿದ ಬಗ್ಗೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಆರೋಪಿತನ ನಿಮ್ಮ ಬ್ಯಾಂಕಿನ ಗ್ರಾಹಕನಾಗಿದ್ದರು ಆತನ ವಿರುದ್ದ ಸಾಕ್ಷ್ಯ ನುಡಿಯಲು ಬಂದಿದ್ದೀರಿ ಎಂದರೆ ನ್ಯಾಯಾಲಯದ ಸಮನ್ಸ ಬಂದ ಕಾರಣ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದು ಹೇಳುತ್ತಾರೆ. ನಿಮಗೆ ಪ್ರಕರಣದ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ನೀವು ಪಿರ್ಯಾದಿದಾರನ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಆರೋಪಿತನದಲ್ಲ ಮತ್ತು ಅದು ಬ್ಯಾಂಕಿನ ಸ್ಪೇಸಿಮನ್ ಸಿಗನೇಚರದೊಂದಿಗೆ ಹೊಂದಾಣಿಕೆ ಆಗದೇ ಇದ್ದರೂ ಸಹ ಪಿರ್ಯಾದಿದಾರನ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ